ಕೃತಿಯ ಪ್ರಸ್ತುತಿ ಮಹತ್ವದ್ದು. 2006ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಯುನೆಸ್ಕೋ ಆಯೋಜಿತ ವಿಶ್ವಶಾಂತಿ ಸಮ್ಮೇಳನದಲ್ಲಿ ಕಾರ್ಯಕ್ರಮ ನೀಡಲು ಆಹ್ವಾನ ಬಂದಾಗ ನಿಜಕ್ಕೂ ಹೆಮ್ಮೆಯಾಗಿದೆ.

◆ **ಈ ದೀರ್ಘ ಪ್ರಯಾಣದಲ್ಲಿ ನೃತ್ಯವು ನಿಮಗೆ ಆತ್ಮಾನಂದವನ್ನು ಕೊಟ್ಟಿದೆ ಎಂದು ಹೇಳಿದಿರಿ. ಆ ಬಗ್ಗೆ ವಿವರಿಸಬಹುದಾ?**

ನಾನು ಚಿಕ್ಕಂದಿನಿಂದಲೂ ಶ್ರೀಕೃಷ್ಣನ ಆರಾಧಕಿ. ಮನೆಯಲ್ಲಿ ಅಪ್ಪ ಅಮ್ಮ ನನ್ನನ್ನು ಪ್ರೀತಿಯಿಂದ 'ವಚ್ಚು' ಎಂದು ಕರೆಯುತ್ತಿದ್ದರು. ಆದರೆ ನಾನು ವಚ್ಚು ಎಂದರೆ ಅವರ ಬಳಿಗೆ ಹೋಗುವುದಕ್ಕಿಂತ ವೇಗವಾಗಿ 'ಕೃಷ್ಣಾ' ಎಂದು ಕರೆದರೆ ಓಡಿಬಿಡುತ್ತಿದ್ದೆ ಎಂದು ಅಮ್ಮ ಹೇಳುತ್ತಿದ್ದಳು. ಭರತನಾಟ್ಯವು ದೈವಿಕ ಕಲೆಯೆಂದು ನಂಬಿ ನಾನು ನಿತ್ಯವೂ ಅದರ ಉಪಾಸನೆಯನ್ನು ಮಾಡುತ್ತೇನೆ. ಕೃಷ್ಣನ ಪುಟ್ಟ ಪದಕವನ್ನು ಕೊರಳಿನಲ್ಲಿ ಸದಾ ಧರಿಸಿರುತ್ತೇನೆ. ನಾನು ಅವನ ಭಕ್ತೆಯೂ ಹೌದು. ಅವನು ನನ್ನ ಸಖನೂ ಹೌದು. ತಾಯಿ ದುರ್ಗೆಯು ನನ್ನ ಎಲ್ಲ ಕಾರ್ಯಸಾಧನೆಗಳಿಗೆ ಶಕ್ತಿಮೂಲ ಎಂದು ನಂಬಿದ್ದೇನೆ. ಅದೇ ಕಾರಣಕ್ಕೆ ನಾನು ನವರಾತ್ರಿ ಸಂದರ್ಭದಲ್ಲಿ ದೇವಿಯ ಆರಾಧನೆಯನ್ನು ಮಾಡುತ್ತೇನೆ. ಈ ರೀತಿಯ ಭಾವಶುದ್ಧಿಯು ನನ್ನ ನೃತ್ಯದ ಮೇಲೆಯೂ ಪರಿಣಾಮ ಬೀರುತ್ತದೆ. ಕೃಷ್ಣನಿಗೆ ಶರಣಾಗಿ ನರ್ತಿಸುವಾಗ ನಾನು ಆನಂದವಶಳಾಗಿ ಶರಣಾಗುವುದುಂಟು. ಇತ್ತೀಚೆಗೆ ಮೈಸೂರಿನ ವಸುಂಧರಾ ಭವನದ ಉದ್ಘಾಟನೆಯಲ್ಲಿ ಒಂದು ವರ್ಣವನ್ನು ಒಂದು ಗಂಟೆ ಇಪ್ಪತ್ತು ನಿಮಿಷ ನಿರಂತರವಾಗಿ ಮಾಡಿದ್ದೇನೆ. ವರ್ಣವು ಮುಕ್ತಾಯವಾದ ಬಳಿಕವೇ ನನಗೆ ಸಮಯ ಇಷ್ಟೊಂದು ಸರಿದಿದೆ ಎಂದು ಅರಿವಾಗಿದ್ದು. ಅಂತಹ ತಲ್ಲೀನತೆಯು ಕೊಡುವ ಆನಂದವು ಪ್ರಶಾಂತವಾದುದು. ಕಲಾವಿದರು ಕಲೆಯನ್ನು ಪ್ರಸ್ತುತಪಡಿಸುವಾಗ ತೋರುವ ತನ್ಮಯತೆಯಲ್ಲಿ ಪ್ರೇಕ್ಷಕರದ್ದೂ ಪಾಲಿದೆ. ಕಲಾವಿದೆ ಮತ್ತು ಪ್ರೇಕ್ಷಕರ ನಡುವೆ ಭಾವನೆಗಳ ಅಂತರವು ಕಡಿಮೆಯಾಗುತ್ತಿದ್ದಂತೆಯೇ ರಸೋತ್ಪತ್ತಿಯ ತೀವ್ರತೆಯು ಉತ್ತುಂಗಕ್ಕೆ ಏರುತ್ತ ಹೋಗುತ್ತದೆ. ಅಂತಹ ಎಲ್ಲ ಪ್ರದರ್ಶನಗಳೂ ಆನಂದವನ್ನು ಕೊಡುತ್ತವೆ.

◆ **ನೃತ್ಯ ಅಥವಾ ಭರತನಾಟ್ಯ ಕ್ಷೇತ್ರದಲ್ಲಿ ಕಳೆದ ಐವತ್ತು ವರ್ಷಗಳಲ್ಲಿ ನೀವು ಗುರುತಿಸಿದ ಬದಲಾವಣೆಗಳು ಏನು?**

ಭರತನಾಟ್ಯವು ಮುಖ್ಯವಾಗಿ ಏಕವ್ಯಕ್ತಿ ಪ್ರದರ್ಶನ. ದೇವಸ್ಥಾನಗಳಲ್ಲಿ ಭಕ್ತಿರಸ ಪ್ರಧಾನವಾಗಿ ಮೂಡಿ ಬರುತ್ತಿದ್ದ ನೃತ್ಯ ಇದು. ಅದರಲ್ಲಿ ಪ್ರೇಕ್ಷಕರು ಮತ್ತು ಕಲಾವಿದರ ನಡುವೆ ಭೌತಿಕ ಅಂತರವೂ ಕಡಿಮೆ. ಅದೇ ರೀತಿ ಭಾವನಾತ್ಮಕ ಅಂತರವೂ ಕಡಿಮೆ ಇರುತ್ತಿತ್ತು. ಅಂದರೆ ಎಲ್ಲರೂ ಭಕ್ತಿಯಿಂದಲೇ ಈ ನೃತ್ಯವನ್ನು ವೀಕ್ಷಿಸುತ್ತಿದ್ದರು. ಆದರೆ ಇತ್ತೀಚೆಗೆ ಭರತನಾಟ್ಯ ಅಥವಾ

